# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 67(ಹಳೆಯ ಸಂಖ್ಯೆ-19), ಸಂಜಯನಗರ. ಬೆಂಗಳೂರು.

ಸಂಖ್ಯೆ: ಸ.ಅ/ವಾ-67(ಹಳೆಯ ಸಂಖ್ಯೆ-19)/ಪಿ.ಆರ್/32/2022-23 ದಿನಾಂಕ:-15-10-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ:-ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-15-10-2022 ರಂದು ವಾರ್ಡ್ ನಂ: 67 (ಹಳೆಯ ಸಂಖ್ಯೆ-19) ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ. ಜ್ಯೋತಿ.ಜಿ ಚೌಳೂಲ್ಕರ್ ಸ.ಕಾ.ನಿ (ಘ.ತ್ಯಾ.ನಿ) ಪುಲಿಕೇಶಿ ನಗರ ವಿಭಾಗ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಶ್ರೀ. ನವನಾಥ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ನಂ: 67(ಹಳೆಯ ಸಂಖ್ಯೆ-19) | |
| 3. | ಪೊಲೀಸ್ ಅಧಿಕಾರಿಗಳು | ಸಂಜಯನಗರ ಪೊಲೀಸ್ ಠಾಣೆ | |
| 4. | ಸಂಚಾರಿ ಪೊಲೀಸ್ ಅಧಿಕಾರಿಗಳು | ಸಂಚಾರಿ ಪೊಲೀಸ್ ಠಾಣೆ, ಆರ್.ಟಿ ನಗರ. | |
| 5. | ಶ್ರೀ.ಗಣೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು. | |
| 6. | ಶ್ರೀ. ಮಂಜುನಾಥ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | |
| 7. | ಬೀದಿ ದೀಪ ನಿರ್ವಾಹಕರು | Street light Incharge, B B M P. | |
| 8. | ಶ್ರೀ.ಪ್ರಕಾಶ್, ಮಾರುತಿ ರಾವ್ ಮತ್ತು ಇತರರು | ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ನವನಾಥ್, ಸಹಾಯಕ ಅಭಿಯಂತರರು ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ಜ್ಯೋತಿ.ಜಿ ಚೋಳೂಲ್ಕರ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ:-**

1. ವಾರ್ಡ್‌ನ ಒಣ ಎಲೆ ತ್ಯಾಜ್ಯ ಸಂಗ್ರಹಣೆ ಫ್ರೀಕ್ವೆನ್ಸಿ ಕಡಿಮೆಯಾಗಿರುತ್ತದೆ, ಹಸಿ ತ್ಯಾಜ್ಯವನ್ನು ದಿನನಿತ್ಯ ಸಂಗ್ರಹಣೆ ಮಾಡುತ್ತಿಲ್ಲದಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಸದರಿ ವಿಷಯದ ಬಗ್ಗೆ ಗಮನ ಹರಿಸಿ ಬಗೆ ಹರಿಸಬೇಕಾಗಿ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

**ಬೀದಿ ದೀಪಗಳ ನಿರ್ವಹಣೆ:-**

1. ವಾರ್ಡ್‌ನ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಿದೆ ಇರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಈ ಬಗ್ಗೆ ಗಮನಹರಿಸಿ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಿಸಲು ಹಾಗೂ ಪ್ರತಿದಿನ ವಾರ್ಡ್‌ನ ಎಲ್ಲಾ ಬೀದಿಗಳಲ್ಲಿ ಪರಿಶೀಲನೆ ಮಾಡಿ ಕಾರ್ಯನಿರ್ವಹಸದೇ ಇರುವ ಬೀದಿ ದೀಪಗಳನ್ನು ಹುಡುಕಿ ಸರಿಪಡಿಸಬೇಕಾಗಿ ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರಿಗೆ ತಿಳಿಸಲಾಯಿತು ಮತ್ತು ಗುತ್ತಿಗೆದಾರರಿಗೆ ವಾರ್ಡ್‌ನ ಎಲ್ಲಾ ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಒಂದು ತಿಂಗಳ ಸಮಯವನ್ನು ಕೊಟ್ಟು ಆದಾಗ್ಯೂ ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದಲ್ಲಿ ಗುತ್ತಿಗೆದಾರರಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ನೋಟೀಸ್ ನೀಡುವುದಾಗಿ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

Scanned with CamScanner

ಬೃಹತ್ ನೀರು ಕಾಲುವೆ:–

1. ವಾರ್ಡ್‌ನಲ್ಲಿ ಹಾದು ಹೋಗುತ್ತಿರುವ ಬೃಹತ್ ನೀರು ಕಾಲುವೆಗಳಲ್ಲಿ ಕಸ ಕಡ್ಡಿ ತುಂಬಿರುತ್ತದೆ, ಹಲ್ಲು ಬೆಳೆದಿರುತ್ತದೆ ಮತ್ತು ಬೃಹತ್ ನೀರು ಕಾಲುವೆಗಳ ಗೋಡೆಗಳು (ಕೆಲವು ಕಡೆ) ಕುಸಿದಿರುತ್ತವೆ ಎಂದು ಸಾರ್ವಜನಿಕರು ತಿಳಿಸಿದರು. ಈ ಬಗ್ಗೆ ಗಮನ ಹರಿಸಿ ಬೃಹತ್ ನೀರು ಕಾಲುವೆಗಳನ್ನು ಡಿ ಸಿಲ್ಟ್ ಮಾಡಲು ಮತ್ತು ಕಾಲುವೆ ಗೋಡೆಗಳನ್ನು ಸರಿಪಡಿಸಬೇಕಾಗಿ ಬೃಹತ್ ಮಳೆ ನೀರು ಕಾಲುವೆ ನಿರ್ವಹಣೆ ಮಾಡುವ ಅಧಿಕಾರಿಗಳು ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)
2. ಡೆಫೋಡಿಯಲ್ ಸ್ಕೂಲ್ ಹಿಂಭಾಗದ ಬೃಹತ್ ನೀರು ಕಾಲುವೆಯನ್ನು ಒತ್ತುವರಿ ಮಾಡಿಕೊಂಡು ವಾಹನಗಳ ಪಾರ್ಕಿಂಗ್‌ಗಾಗಿ ಉಪಯೋಗಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದರಿಂದ ಒತ್ತುವರಿಯನ್ನು ತೆರವುಗೊಳಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ಸಾರ್ವಜನಿಕರು ಕೋರಿದರು. ಬೃಹತ್ ಮಳೆ ನೀರು ಕಾಲುವೆ ನಿರ್ವಹಣೆ ಮಾಡುವ ಅಧಿಕಾರಿಗಳಿಗೆ ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

ಆರೋಗ್ಯ ಇಲಾಖೆ:–

1. ವಾರ್ಡ್‌ನ ವಿವಿಧ ಸ್ಥಳಗಳಲ್ಲಿ ನೀರು ನಿಂತು ಸೊಳ್ಳೆಗಳ ಕಾಟ ಹೆಚ್ಚಾಗುತ್ತಿರುವುದರಿಂದ ಸ್ಪ್ರೇಯನ್ನು ಸಿಂಪಡಿಸಬೇಕಾಗಿ ಆರೋಗ್ಯಾಧಿಕಾರಿಗಳಿಗೆ ತಿಳಿಸಲಾಯಿತು.

ಕಾಮಗಾರಿ ಇಲಾಖೆ:–

1. ವಾರ್ಡ್‌ನ ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 4ನೇ ಕ್ರಾಸ್‌ನಲ್ಲಿ ರಸ್ತೆ ಬದಿಯಲ್ಲಿರುವ ಡೆಬ್ರೀಸ್ ಅನ್ನು ತೆಗೆಯಲು ಸಾರ್ವಜನಿಕರು ಕೋರಿದರು.
2. ವಾರ್ಡ್‌ನ ವಿವಿಧ ರಸ್ತೆಗಳಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚಬೇಕಾಗಿ ಸಾರ್ವಜನಿಕರು ಕೋರಿದರು. ಮೇಲ್ಕಂಡ ವಿಷಯಗಳ ಬಗ್ಗೆ ಗಮನಹರಿಸಿ ಬಗೆಹರಿಸಬೇಕಾಗಿ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು.

ಉದ್ಯಾನವನ:–

1. ವಾರ್ಡ್‌ನ ವಿವಿಧ ಲೇಔಟ್‌ಗಳಲ್ಲಿ ಬರುವ ಪಾರ್ಕ್‌ಗಳನ್ನು ಸೂಕ್ತವಾಗಿ ನಿರ್ವಹಿಸಬೇಕಾಗಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಅರಣ್ಯ ಇಲಾಖೆ:–

1. ಇಲ್ಲಿಯವರೆಗೂ ಯಾವುದೇ ಸಭೆಗೂ ಅರಣ್ಯಾಧಿಕಾರಿಗಳು ಹಾಜರಾಗದಿರುವ ಬಗ್ಗೆ ನೋಡಲ್ ಅಧಿಕಾರಿಗಳು ವಿಷಾದ ವ್ಯಕ್ತ ಪಡಿಸಿದರು. ಮತ್ತು ಸದರಿ ಅಧಿಕಾರಿಗಳಿಗೆ ವಾರ್ಡ್ ಸಭೆಗೆ ಹಾಜರಾಗಲು ಪತ್ರ ಮುಖಾಂತರ ತಿಳಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)
2. ವಾರ್ಡ್‌ನಲ್ಲಿ ಬರುವ ವಿನಾಯಕ ಲೇಔಟ್, ಆರ್.ಎಂ.ಎಸ್ ಲೇಔಟ್ ಮತ್ತು ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ಜೋತುಬಿದ್ದಿರುವ ಮರದ ಕೊಂಬೆಗಳನ್ನು ಕತ್ತರಿಸಲು ಅರಣ್ಯಾಧಿಕಾರಿಗಳಿಗೆ ಸೂಚಿಸುವಂತೆ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು. ಅರಣ್ಯ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಾಗದಿರುವ ಬಗ್ಗೆ ವಿಷಾದ ವ್ಯಕ್ತ ಪಡಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

ಬಿ.ಡಬ್ಲ್ಯೂ.ಎಸ್.ಎಸ್.ಬಿ:–

1. ವಾರ್ಡ್‌ನ ಆರ್.ಎಂ.ಎಸ್ ಕಾಲೋನಿಯಲ್ಲಿ ವಾಟರ್ ಪ್ರೇಜರ್ ಕಡಿಮೆ ಆಗಿರುವುದರ ಬಗ್ಗೆ ಮತ್ತು ಕಡಿಮೆ ಸಮಯ ನೀರು ಬಿಡುತ್ತಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು ಮತ್ತು ವಾಟರ್ ಸಪ್ಲೇ ಪೈಪ್‌ಗಳನ್ನು ಹೈಯರ್ ಡೈಯರ್ ಡಯಾಮೀಟರ್‌ಗೆ ಬದಲಿಸುವಂತೆ ಈಗಾಗಲೇ ಹಲವು ಬಾರಿ ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ವಿಷಯಗಳ ಬಗ್ಗೆ ಕ್ರಮ ವಹಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
2. ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 4ನೇ ಅಡ್ಡರಸ್ತೆಯಲ್ಲಿ ಸೀವೇಜ್ ಪೈಪ್‌ಲೈನ್ ಅನ್ನು ಹೈಯರ್ ಡೈಯರ್ ಡಯಾಮೀಟರ್‌ಗೆ ಬದಲಿಸುವಂತೆ ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ವಿಷಯಗಳ ಬಗ್ಗೆ ಕ್ರಮ ವಹಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

Scanned with CamScanner

3. ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 1ನೇ ಎ ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್ ಸಿಂಕ್ ಆಗಿರುವ ಬಗ್ಗೆ ಈಗಾಗಲೇ ಹಲವು ಬಾರಿ ತಿಳಿಸಿದರೂ ಸಹ ಕ್ರಮ ಕೈಗೊಂಡಿಲ್ಲವೆಂದು ಸಾರ್ವಜನಿಕರು ತಿಳಿಸಿದರು. ಸದರಿ ವಿಷಯದ ಬಗ್ಗೆ ತುರ್ತಾಗಿ ಗಮನಹರಿಸಿ ಸರಿಪಡಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
4. ಸಂಜಯನಗರದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಛೇರಿ ಹತ್ತಿರ ನಿರ್ಮಾಣ ವಾಗುತ್ತಿರುವ ಹೊಸ ಆಸ್ಪತ್ರೆಯ ಮದ್ಯಭಾಗದಲ್ಲಿ ವಾಟರ್ ಪೈಪ್‌ಲೈನ್ ಹಾದು ಹೋಗಿದ್ದು, ಅದರ ಪಥವನ್ನು ಬದಲಾಯಿಸಬೇಕಾಗಿ ಸಾರ್ವಜನಿಕರು ಕೋರಿದರು. ಸದರಿ ವಿಷಯದ ಬಗ್ಗೆ ತುರ್ತಾಗಿ ಗಮನಹರಿಸಿ ಸರಿಪಡಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
5. ವಾರ್ಡ್‌ನ ಮ್ಯಾನ್‌ಹೋಲ್ ಡಿ-ಸಿಲ್ಟಿಂಗ್ ವೇಳಾಪಟ್ಟಿಯನ್ನು ತಯಾರಿಸಿ ಸಾರ್ವಜನಿಕರಿಗೆ ಮುಂಚಿತವಾಗಿ ತಿಳಿಸಬೇಕಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

**ಟ್ರಾಫಿಕ್ ಮತ್ತು ಕಾನೂನು ಸುವ್ಯವಸ್ಥೆ-**

1. ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 1ನೇ ಮುಖ್ಯರಸ್ತೆ ಪ್ರವೇಶ ಸ್ಥಳದಲ್ಲಿರುವ ಗ್ಯಾರೇಜ್‌ನ ವಾಹನಗಳು ರಸ್ತೆ ಬದಿಯಲ್ಲಿ ನಿಲ್ಲಿಸುವುದರಿಂದ ಹಾಗೂ ಕೆಲವು ವಾಹನಗಳು ತಿಂಗಳುಗಟ್ಟಲೆ ಒಂದೇ ಸ್ಥಳದಲ್ಲಿ ನಿಲ್ಲಿಸುತ್ತಿರುವುದರ ಬಗ್ಗೆ ಸಾರ್ವಜನಿಕರು ದೂರಿದರು. ಸದರಿ ವಿಷಯದ ಬಗ್ಗೆ ಗಮನ ಹರಿಸಿ ಸಮಸ್ಯೆಯನ್ನು ಬಗೆಹರಿಸುವಂತೆ ಟ್ರಾಫಿಕ್ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
2. ವಾರ್ಡ್‌ನ ವಿದ್ಯಾಸಾಗರ್ ಶಾಲೆಯ ಎದುರುಗಡೆ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿರುವ ಬಗ್ಗೆ ಹಲವಾರು ಬಾರಿ ಮತ್ತು ಉಡುಪಿ ಹೋಟೆಲ್ ಎದುರುಗಡೆ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿರುವ ಬಗ್ಗೆ ಹಲವಾರು ಬಾರಿ ತಿಳಿಸಿದರೂ ಸಹ ಟ್ರಾಫಿಕ್ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವ ಬಗ್ಗೆ ಸಾರ್ವಜನಿಕರು ದೂರಿದರು. ಸದರಿ ವಿಷಯದ ಬಗ್ಗೆ ಗಮನ ಹರಿಸಿ ಸಮಸ್ಯೆಯನ್ನು ಬಗೆಹರಿಸುವಂತೆ ಟ್ರಾಫಿಕ್ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
3. ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 1ನೇ ಮುಖ್ಯರಸ್ತೆಯಲ್ಲಿ ರಾತ್ರಿ ವೇಳೆ ಪುಂಡ ಪೋಕರಿಗಳು ಬೈಕ್ ವೀಲಿಂಗ್ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಹಾಗೂ ಸಿ.ಸಿ ಟಿವಿಯಲ್ಲಿ ರೆಕಾರ್ಡ್ ಆಗಿರುವ ಚಿತ್ರಗಳನ್ನು ಸಾರ್ವಜನಿಕರು ತೋರಿಸಿದರು. ಸದರಿ ವಿಷಯದ ಬಗ್ಗೆ ಗಮನ ಹರಿಸಿ ಸಮಸ್ಯೆಯನ್ನು ಬಗೆಹರಿಸುವಂತೆ ಟ್ರಾಫಿಕ್ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
4. ಸಂಜಯನಗರ ವಾರ್ಡ್‌ನ ಕಾಂತಿ ಸ್ವೀಟ್ ಮತ್ತು ಉಡುಪಿ ಹೋಟೆಲ್ ಮದ್ಯ ಬರುವ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳು ಪಾರ್ಕ್ ಮಾಡಿ ಸಾರ್ವಜನಿಕರ ವಾಹನಗಳು ಓಡಾಡಲು ತೊಂದರೆ ಆಗುತ್ತಿರುವ ಬಗ್ಗೆ ಹಾಗೂ ಹೋಟೆಲ್ ಸಿಬ್ಬಂಧಿಗಳು ಶಾಲಾ ವಾಹನಗಳನ್ನು ಕೂಡ ಮುಖ್ಯರಸ್ತೆಗೆ ನಿಲ್ಲಿಸಿ ಹೋಟೆಲ್‌ಗಳಿಗೆ ಬರುವ ಜನರ ವಾಹನಗಳನ್ನು ಸುಗಮವಾಗಿ ಸಂಚಾರ ಮಾಡಲು ಸಹಾಯ ಮಾಡುತ್ತಿರುವುದಾಗಿ ಸಾರ್ವಜನಿಕರು ದೂರಿದರು. ಸದರಿ ವಿಷಯದ ಬಗ್ಗೆ ಗಮನಹರಿಸಬೇಕಾಗಿ ಟ್ರಾಫಿಕ್ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
5. ವಾರ್ಡ್‌ನ ಕಲ್ಪನಾ ಚಾವ್ಲ ರಸ್ತೆಯಿಂದ ಸೆಂಟ್ರಲ್ ಎಕ್ಸೈಜ್ ಲೇಔಟ್, 1ನೇ ಅಡ್ಡರಸ್ತೆಯ ತಿರುವಿನಲ್ಲಿ ಇರುವ ಬೇಕರಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಜನರು ಧೂಮಪಾನ ಮಾಡುತ್ತಿರುವ ಬಗ್ಗೆ ಜನರು ದೂರಿದರು ಸದರಿ ವಿಷಯದ ಬಗ್ಗೆ ಗಮನಹರಿಸಬೇಕಾಗಿ ಪೊಲೀಸ್ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

**ಬೆಸ್ಕಾಂ:-**

1. ವಾರ್ಡ್‌ನಲ್ಲಿ ಬೆಸ್ಕಾಂ ನಿಂದ ಯು.ಜಿ ಕೇಬಲ್ ಅಳವಡಿಸುತ್ತಿರುವ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಸದರಿ ಕಾಮಗಾರಿಯಿಂದ ನಿರ್ಮಾಣವಾದ ರಸ್ತೆ ಗುಂಡಿಗಳನ್ನು ಡಾಂಬರೀಕರಣ ಮಾಡುವ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರು ರವರಿಗೆ ತಿಳಿಸಲು ಬೆಸ್ಕಾಂ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

Scanned with CamScanner

ವಾರ್ಡ್‌ನ ಅಧ್ಯಕ್ಷರು ಮಾತನಾಡುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ

Scanned with CamScanner